6.	ಶಾಂತ ಮಲ್ಲಿಕಾರ್ಜುನ ಯುವಕ ಸಂಘ, ಕಂದಳ್ಳಿ	ರೂ.3,000-00
7.	ಶ್ರೀ ಬಸವೇಶ್ವರ ಯುವಕ ಸಂಘ, ಸುಯಿಮಂಗಳೂರು	ರೂ.3,000-00
8.	ಚಂದ್ರೋದಯ ಯುವಕ ಸಂಘ, ಹಾನಗಲ್ಲು ಶೆಟ್ಟಳ್ಳಿ	ರೂ.3,000-00
9.	ಡಾ: ಅಂಬೇಡ್ಕರ್ ಯುವಕ ಸಂಘ, ಯಡೂರು	ರೂ.3,000-00
10.	ಇಂದಿರಾ ಯುವತಿ ಮಂಡಳಿ, ತಾಕೇರಿ	ರೂ.3,000-00
11.	ಡಾ: ಅಂಬೇಡ್ಕರ್ ಯುವಕ ಸಂಘ, ಹೆಬ್ಬಾರ್	ರೂ.3,000-00
12.	ಜಯ - ಯುವತಿ ಮಂಡಳಿ, ನಂಜರಾಯ ಪಟ್ಟಣ	ರೂ.3,000-00

ವಿರಾಜಪೇಟೆ ತಾಲ್ಲೂಕು

1.	ಸುಬ್ರಮಣ್ಯ ಯುವಕ ಸಂಘ, ಹರಿಹರ	ರೂ.3,000-00
2.	ಪ್ರತಿಭಾ ಯುವಕ ಸಂಘ, ನವತ್ಲೊಕ್ಕು	ರೂ.3,000-00
3.	ಮಾತಾ ಯುವತಿ ಮಂಡಳಿ, ಬೆಟ್ಟಂಗಾಲ	ರೂ.3,000-00
4.	ಈಶ್ವರ ಯುವತಿ ಮಂಡಳಿ, ನಾಲ್ಕೇರಿ	ರೂ.3,000-00

ಶಿವಮೊಗ್ಗ ಜಿಲ್ಲೆಯಲ್ಲಿ ಹೆದ್ದಾರಿ ಕಾಮಗಾರಿ ಗುತ್ತಿಗೆ.

೨೧೪೪(೨೬೭೮) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಶಿವಮೊಗ್ಗ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿ ನಿರ್ವಹಣೆಯ ಗುತ್ತಿಗೆಯನ್ನು ಯಾರಿಗೆ ವಹಿಸಲಾಗಿದೆ ಎಷ್ಟು ಸಮಯವಾಗಿದೆ.

2. ಇದುವರೆಗೆ ಎಷ್ಟು ರಸ್ತೆಗಳ ಕಾಮಗಾರಿ ಆರಂಭವಾಗಿದೆ.

3. ವಿಪರೀತ ಮಳೆಯಿಂದ ತೀರ್ಥಹಳ್ಳಿ ತಾಲ್ಲೂಕಿನ ಕೆಲವು ರಾಜ್ಯ ಹೆದ್ದಾರಿಯಿಂದ ವಾಹನ ಓಡಾಟಕ್ಕೆ ಹೆಚ್ಚಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಬಂದಿದ್ದಲ್ಲಿ ನಿರ್ವಹಣೆ ವಿಳಂಬವಾಗಲು ಕಾರಣವೇನು;

4. ಈ ರಸ್ತೆ ದುರಸ್ತಿ ಕಾಮಗಾರಿಯನ್ನು ಎಂದು ಮುಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಶಿವಮೊಗ್ಗ ಜಿಲ್ಲೆಯ ೩೭೬.೫೫ ಕಿ.ಮೀ. ರಾಜ್ಯ ಹೆದ್ದಾರಿಯನ್ನು ರೂ. ೭೬೮.೧೯ ಲಕ್ಷ ಮೊತ್ತದ ಅಂದಾಜಿನಲ್ಲಿ ಮೂರು ವರ್ಷಗಳ ನಿರ್ವಹಣೆಗಾಗಿ ಮೆ:

ಪ್ರತಿಭಾ ಕನ್‌ಸ್ಟ್ರಕ್ಷನ್ಸ್ ಇವರಿಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದೆ.

ಸದರಿಯವರೊಂದಿಗೆ ದಿನಾಂಕ: ೧೬-೫-೨೦೦೧ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದ್ದು ಕರಾರಿನನ್ವಯ ಕಾಮಗಾರಿಯನ್ನು ೪-೬-೨೦೦೧ರಿಂದ ಪ್ರಾರಂಭಿಸಲಾಗಿರುತ್ತದೆ.

೨. ಇದುವರೆವಿಗೂ ೩ ರಸ್ತೆಗಳಲ್ಲಿ ಅಂದರೆ ಕುಮಟ-ಕಡಮಡಗಿ ರಾಜ್ಯ ಹೆದ್ದಾರಿ ಹೊನ್ನಾಳಿ-ಬೈಂದೂರು ರಾಜ್ಯ ಹೆದ್ದಾರಿ ಹಾಗೂ ಗಂಗಾಮೂಲ- ತಡಸ ರಾಜ್ಯ ಹೆದ್ದಾರಿಗಳಲ್ಲಿ ಕಾಮಗಾರಿ ಪ್ರಾರಂಭವಾಗಿರುತ್ತದೆ.

೩. ಭಾರೀ ಮಳೆಯಿಂದ ವಾಹನ ಸಂಚಾರಕ್ಕೆ ಸ್ವಲ್ಪಮಟ್ಟಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದಾಗ್ಯೂ ನಿರ್ವಹಣೆ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

೪. ಗುತ್ತಿಗೆ ಕರಾರಿನನ್ವಯ ರಾಜ್ಯ ಹೆದ್ದಾರಿಗಳ ಮೂರು ವರ್ಷಗಳ ನಿರ್ವಹಣೆ ಕಾಮಗಾರಿಯನ್ನು ದಿನಾಂಕ ೪-೬-೨೦೦೧ ರಂದು ಪ್ರಾರಂಭಿಸಿ ೪-೬-೨೦೦೪ರಂದು ಪೂರ್ಣಗೊಳಿಸಬೇಕಾಗಿರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧದ ಆದೇಶ ಜಾರಿ.

2189(2679) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನಮ್ಮ ಪರಿಸರ ಜೀವರಕುಲದ ಆರೋಗ್ಯಕ್ಕೆ ತೀವ್ರ ಮಾರಕವಾಗಿರುವ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಿದೆಯೇ ಹೊರಡಿಸಿದ್ದಲ್ಲಿ ಇದು ಎಂದಿನಿಂದ ಜಾರಿಗೆ ಬಂದಿದೆ;

ಆ) ಆದೇಶ ಜಾರಿಗೆ ಬಂದ ನಂತರ ಪ್ಲಾಸ್ಟಿಕ್ ಬಳಕೆ ನಿಷೇಧವಾಗುತ್ತಿದೆಯೇ ಆಗದಿದ್ದಲ್ಲಿ ಇದಕ್ಕೆ ಕಾರಣಗಳೇನು;

ಇ) ಈ ಆದೇಶ ಅನುಷ್ಠಾನಕ್ಕೆ ಬಂದಿರುವ ಹಾಗೂ ಬಾರದಿರುವ ಜಿಲ್ಲೆಗಳಾವುವು;

ಈ) ಧಾರವಾಡ ಜಿಲ್ಲೆಯಲ್ಲಿ ಈ ಆದೇಶ ಯಾವ ಹಂತದಲ್ಲಿದೆ; ಆದೇಶದ ಹಿನ್ನಡೆಯಾಗಲು ಕಾರಣವೇನು?